Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅಂಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬಂಕಯ್ಯರು [ಬಿಡಿ ಪ್ರತಿ 3 ಸೈ

16—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಸಂಜೀವರೆಡ್ಡಿ ಭವಿಷ್ಯ

ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್ ಸಂಜೀವ ರೆಡ್ಡಿಯವರು ಆಂಧ್ರ ವಿಧಾನ ಸಭೆಗೆ ಸ್ಪರ್ಧಿಸುವರೆಂದು ನವ ದೆಹಲಿ ವಂದಿ ತಿಳಿಸುತ್ತದೆ. ಪಂ|| ನೆಹರು ಅವರನ್ನು ವಿಧಾನ ಸಭೆಗೆ ಸ್ಪರ್ಧಿಸುವಂತೆ ಸಲಹೆ ಮಾಡಿರುವದಾಗಿ ಗೊತ್ತಾಗಿದೆ. ಆಂಧ್ರ ಶಾಸನ ಸಭೆ ಕಾಂಗ್ರೆಸು ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸುವರು.

ಉದ್ಘಾಟನೆ

ಖಾಂಡ್ಲಾ–ಅಹಮದಾಬಾದು ಸೇತುವೆಯನ್ನು ಗುಜರಾತು ಮುಖ್ಯಮಂತ್ರಿ ಡಾ|| ದೇವರಾಜ ಮೆಹತ ನಿನ್ನೆ ದಿನ ಬೆಳಿಗ್ಗೆ ಉದ್ಘಾಟನೆ ಮಾಡಿದರು. ಇದರ ವೆಚ್ಚ 1 ಕೋಟಿ ರೂ

ವ್ಯವಸಾಯ ಸಂತೆ

ಈ ವರ್ಷ 6 ವ್ಯವಸಾಯ ಸಂತೆಗಳ ನ್ನೇರ್ಪಡಿಸುವದಾಗಿ ಮದರಾಸಿನಲ್ಲಿ ಕೇಂದ್ರ ವ್ಯವಸಾಯ ಮಂತ್ರಿ ಡಾ|| ಪಂಜಾಬರಾವ್ ದೇಶಮುಖರು ನಿನ್ನೆ ತಿಳಿಸಿದರು.

ವಾರ್ಷಿಕ ಕವಾಯತು

ನಿನ್ನೆ ನವ ದೆಹಲಿಯಲ್ಲಿ ಸೇನಾ ವಾರ್ಷಿಕ ಕವಾಯತು ನೆಂವೇರಿತು. ಭಾರತ ದಂಡನಾಯಕರಾದ ಜ|| ಥಿಮ್ಮಯ್ಯರವರು ವಂದನೆ ಸ್ವೀಕರಿಸಿದರು. ಅವರು ಭಾಷಣ ಮಾಡುತ್ತಾ ಗೋವಾ, ಕಾಂಗೊ ವಿನಲ್ಲಿ ಭಾರತದ ಸೇನೆ ಯಶಸ್ವಿಯಾಗಿ ಕಾರ್ಯಾಚರಣೆ ಮಾಡಿದೆ ಎಂದರು. ಭಾರತದ ಸೇನೆ ಜಗತ್ತಿನಲ್ಲಿ ಕೀರ್ತಿಗಳಿಸಿದೆ ಎಂದರು.

೦೦

ಭಾರತ–ಚೀನಾ ಕಲಹ ಪರಿಹಾರಕ್ಕೆ ಪ್ರಯತ್ನ ಮಾಡಲು ಒರ್ವಾ ಪ್ರಧಾನಿ ಊ ನೂ ಮುಂದೆಬಂದಿರುವರು.

ಪಥದಲ್ಲಿ ಪಂಜಾಬಿ ಸುಬ ರಚನೆ ಆಗುವದಾಗಿ ಕಾನ್ಪುರದಲ್ಲಿ ಸಂತ ಫತೇ ಸಿಂಗರು ತಿಳಿಸಿದ್ದಾರೆ.

ಚುನಾವಣೆ ವಾರ್ತೆ

ಫೆಬ್ರವರಿ 25 ರ ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆ ವರಗೆ ವಿಧಾನ ಸಭೆ ಹಾಗೂ ಪಾರ್ಲಿಮೆಂಟರಿ ಕ್ಷೇತ್ರದ ಮೈಸೂರು ನಗರ, ಮೈಸೂರು ನಗರ ಉತ್ತರ ಹಾಗೂ ಮೈಸೂರು ಕ್ಷೇತ್ರಗಳಲ್ಲಿ ನಡೆಯುವದೆಂದು ಪೌರಸಭೆ ಕಮಿಷನರ್ ಶ್ರೀ ಬಿ ಎಸ್. ನಂಜುಂಡಗೌಡರು ಪತ್ರಿಕಾ ಪ್ರಕಟಣೆ ಇತ್ತಿದ್ದಾರೆ.

ಪೌರಸಭೆ ಕಚೇರಿ, ಜಿಲ್ಲಾ ಕಚೇರಿ, ಮೈಸೂರು ತಾಲ್ಲೂಕು ಕಚೇರಿ, ಅಕ್ಕಾಪ್ಪಯಿ ಆಫೀಸುಗಳಲ್ಲಿ ನುತದಾನ ಮಾಡಬೇಕಾದ ಸ್ಥಳಗಳನ್ನ ಕೊಟ್ಟಿದೆ ಎಂದು ಅವರು ತಿಳಿಸಿದ್ದಾರೆ 13 ಸೇ ತಾ|| ನಿಂದ 20 ನೆಯ ತಾ|| ವರಗೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಂವರಿಗೆ ಮೈಸೂರು ನಗರ ವಿಧಾನ ಸಭೆ ಕ್ಷೇತ್ರದ ನಾಮನಿರ್ದೇಶನ ಪೇಪರುಗಳನ್ನು ಎಲ್ಲ ಕ್ಷೇತ್ರಗಳಿಗೂ ರಿಟರ್ನಿಂಗ್ ಆಫೀಸರು ಸ್ವೀಕರಿಸುವರು. ಮೈಸೂರು ನಗರ, ಮೈಸೂರು ನಗರ ಉತ್ತರ ಮತ್ತು ಮೈಸೂರು ಕ್ಷೇತ್ರಗಳಿಗೆ ಮೈಸೂರು ತಾಲ್ಲೂಕಿನ ತಾಸೀಲದಾರರು ಮತ್ತು ಅಸಿಸ್ಟೆಂಟು ರಿಟರ್ನಿಂಗ್ ಆಫೀಸರು ಸ್ವೀಕರಿಸುವರು.

ಜಿಲ್ಲಾ ಸಮಾಚಾರ ಕೇಂದ್ರ

ಜಿಲ್ಲಾ ಸಮಾಚಾರ ಕೇಂದ್ರ ಮತ್ತು ಪ್ರವಾಸಿ ಸ್ವಾಗತ ಕಚೇರಿಯ ಆರಂಭೋತ್ಸವ ಉದ್ಘಾಟನೆಯನ್ನು ಉಪ ಗೃಹ ಮಂತ್ರಿ ಶ್ರೀ ಬಿ ಬಸವಲಿಂಗಪ್ಪನವರು ನಾಳೆ ಬೆಳಿಗ್ಗೆ 9–30 ಗಂಟೆಗೆ ಮೈಸೂರು ದಸರಾ ವಸ್ತುಪ್ರದರ್ಶನಾಲಯದಲ್ಲಿ ಉದ್ಘಾಟಿಸುವರು

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

17 ದ್ವಾದಶಿ ರೋಹಿಣಿ .

× ಅನಂತರುಂದ ತಾತಶಾ ಗ್ರಾಮದಲ್ಲಿ ಆದ ಅಗ್ನಿ ಅನಾಹುತದಲ್ಲಿ 3 ಮಂದಿ ಸತ್ತಿದ್ದಾರೆ.

ವಿವಿಧ ವಿಷಯಗಳು

ಯಾವ ಪಕ್ಷಗಳೊಡನೆಯೂ ಕಾಂಗ್ರೆಸು ಚುನಾವಣೆ ಒಪ್ಪಂದ ಮಾಡಿಕೊಳ್ಳುವುದಿಲ್ಲವೆಂದು ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್ ಸಂಜೀವರೆಡ್ಡಿ ದೆಹಲಿಯಲ್ಲಿ ವರ್ತೆ ತಿಳಿಸಿದ್ದಾರೆ

ಪಾಕಿಸ್ತಾನ ಅಧ್ಯಕ್ಷ ಅಯೂಬರು ಕರಾಚಿಯಲ್ಲಿ ಹೇಳಿಕೆಯಿತ್ತು, ನಮ್ಮ ಸೇನೆ ಒಲವಾಗಿದೆ, ನಮ್ಮ ದೇಶದ ವೇಲೆ ಕೆಟ್ಟ ದೃಷ್ಟಿ ಇಟ್ಟವನ್ನು ಅದು ದಂಡಿಸಬಲ್ಲುದು ಎಂದರು.

ಕಾಲೇಜು ಅಥವಾ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಾವುದಾದರೊಂದು ವಿಧದ ಸೇನಾ ಶಿಕ್ಷಣ ಪಡೆದಿರಬೇಕೆಂಬುದು ಪ್ರಧಾನಿ ನೆಹರು ಅಭಿಪ್ರಾಯವಾಗಿದೆ ಎಂದು ವಾರ್ತಾಪತ್ರಿಕೆ ವಾರ್ತೆ ತಿಳಿಸುತ್ತದೆ

ಕೊಂಕಣ ತೀರದ ಹಾಫಲ ಬಂದರಿನಲ್ಲಿ 68 ಮಂದಿ ದೋಣಿ ಮುಳುಗಿ ವರಣವನ್ನು ಹೊಂದಿದ ಬಗೆ, ನ್ಯಾಯಾಂಗ ವಿಚಾರಣೆ ನಡೆಯಬೇಕೆಂಬುದು ಸರ್ಕಾರಿ ಪರಿಶೀಲನೆಯಲ್ಲಿದೆ

ಮೈಸೂರಿನಲ್ಲಿ ಕಾಂಗ್ರೆಸಿನ ಚುನಾವಣೆ ಉದ್ಘಾಟನೆ ಸಂದರ್ಭದಲ್ಲಿ ಆದ ಗೊಂದಲದ ಬಗ್ಗೆ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ವ್ಯಥೆಪಟ್ಟರೆಂದು, ಕಾಂಗ್ರೆಸಿಗರಿಗೆ ಇನ ಸಂಪರ್ಕ ಹೋಗಿರುವುದು ಇದಕ್ಕೆ ಕಾರಣವೆಂದು ಅಭಿಪ್ರಾಯಪಟ್ಟರೆಂದು ನಮ್ಮ ಪ್ರತಿನಿಧಿಯವರು ತಿಳಿಸುತ್ತಾರೆ,

ಭಟ್ಟಿ ಇಳಿಸುತ್ತಿದ್ದುದು ಪತ್ತೆ

ಮೈಸೂರು ನಂಡಿಮೊಹಲ್ಲದ ಬೊಂಬು ಬಜಾರಿನಲ್ಲಿ ಶಾ|| 11 ರ ರಾತ್ರಿ 3 ವರೆ ಗಂಟೆಯಲ್ಲಿ ಭಟ್ಟಿಯನ್ನು ಇಳಿಸುತ್ತಿದ್ದ ಗುಲಾಬಿ ಸಾಬಿಯ ಮಗ ಮುಹಮದ್ ಪೀರ್, ಅಬ್ದುಲ್ ಸತ್ತಾರಿನ ಮಗ ಅಬ್ದುಲ್ ಹಮಿದ್ ಮತ್ತು ಅಬ್ದುಲ್ ರಹಮಾನಿನ ಮಗ ನೂರ್ ಮುಹಮದ್ ಎಂಬವರನ್ನು ನಂಡಿ ಪೋಲೀಸರು ಬಂಧಿಸಿ ಅವರ ವೇಲೆ ಮೊಕದ್ದಮೆ ಹೂಡಿರುವರು, ಅವರಿಂದ ಎರಡೂ ಕುಂಬಿದ 5 ಮಡಿಕೆ ಹಾಗೂ 3 ಡಬ್ಬಿಂ ಮದ್ಯ ಹಾಗೂ ಸಾರಾಯಿ ಭಟ್ಟಿ ಉಪಕರಣಗಳನ್ನು ವಶಪಡಿಸಿಕೊಳ್ಳಲಾಯಿತು

★

ಕಲಸಗೇರಿಯಲ್ಲಿರುವ ದೊಡ್ಡ ಕೊಂಡಯ್ಯನ ಮಗ ಕೊಂಡಯ್ಯನ ಮನೆಯಲ್ಲಿ 47 ಗ್ಯಾಂ ಸಾರಾಯಿಯನ್ನು ತುಂಬಿದ್ದ 6 ಸೀಸೆಗಳನ್ನು, ವಶಪಡಿಸಿಕೊಳ್ಳಲಾಯಿತು. ಆವನ ಬಂಧನವಾಗಿದೆ

೦೦

ಮೈಸೂರು ನಗರದ ಕೈರಂ ಬ್ಯಾಂಚಿನ ಪೋಲೀಸರು ಐದು ಬಾರಿ ಅಪರಾಧಿ ಮಾಡಿ ಶಿಕ್ಷೆಗೊಳಗಾಗಿದ್ದ ಕೇಡಿ ಗುಂಡ್ಲು ಪೇಟೆ ತಾಲ್ಲೂಕಿನ ದೊಡ್ಡ ಹಳ್ಳಿಯ ಬೆಲ್ಲ ಶೆಟ್ಟಿಯ ಮಗ ಸಿದ್ದಶೆಟ್ಟಿ ಉರುಫ್ ಜವಂಶೆಟ್ಟಿ ಎಂಬವನು ನಾಳೆಯ ವರಿಗೆ ಪೋಲೀಸರ ವಶದಲ್ಲಿರುವನು.

೦೦

ಪಂಜಾಬಿನ ಜಾಗದಿ, ತಾಸಿಲಿನ ರಾವುಪ್ರಂ ಖಧಾರಿಗೆ ಬೆಂಕಿ ಬಿದ್ದು ಇಡೀ ನೂರು ಕುಟುಂಬಗಳು ನಿರ್ವಾಸಿತರಾಗಿದ್ದಾರೆ

ಚುನಾವಣೆ ನಾಮಪತ್ರಗಳ ಸಲ್ಲಿಕೆ

ಮೈಸೂರು ನಗರ ಕ್ಷೇತ್ರದಿಂದ ವಿಧಾನ ಸಭೆಗೆ ನಿನ್ನೆ ಈ ಕೆಳಿಗೆ ಕಂಡವರು ನಾಮಪತ್ರ ಸಲ್ಲಿಸಿದರು —

ಡಾ|| ಎಸ್ ಎಸ್. ನಾರಾಯಣರಾವ್, ಡಾ|| ರಾವ್, ಶ್ರೀ ಹೆಚ್. ಎಸ್. ನರಸಿಂಹ ಮೂರ್ತಿ. ಉತ್ತರ ಕ್ಷೇತ್ರದಿಂದ ಶ್ರೀಮತಿ ಪುಟ್ಟತಾಯಮ್ಮ ನವರು ನಾಮಪತ್ರ ಸಲ್ಲಿಸಿದರು

ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ವಿದ್ಯಾರ್ಥಿಗಳ ಮುಷ್ಕರ

ಮುಖ್ಯ ಮಂತ್ರಿ ಬಿ ಡಿ ಜತ್ತಿಯವರು ಇತ್ತೀಚಿಗೆ ಇತ್ತಿರುವ ಹೇಳಿಕೆಯನ್ನು ಕುರಿತು, ಜಿ ಸಿ ಎಂ ವಿದ್ಯಾರ್ಥಿ ಸಂಘದ ವಕ್ತಾಂ ಶ್ರೀ ಚ ಶ ಕೊಂತಿಕಲ್ಲ ಹೇಳಿಕೆಯಿತ್ತು, ಜಿ ಸಿ ಎಂ ಎ ಕೋರ್ಸ್ನ ಆಯುರ್ವೇದ ಹಾಗೂ ಅಲೋಪಥಿಕ್ ವೈದ್ಯಪದ್ಧತಿಗಳ ಸಮ್ಮಿಶ್ರ ಶಿಕ್ಷಣ ವೆಂದೂ, ಒಟ್ಟ 29 ತಿಂಗಳುಗಳ ಹಾಸ್ಪಿಟಲ್ ಟ್ರೈನಿಂಗ್'ನಲ್ಲಿ 21 ತಿಂಗಳು ಅಲೋಪೆತಿಕ್ ವೈದ್ಯಪದ್ಧತಿಯಂತೆಯೂ, ಕೇವಲ 8 ತಿಂಗಳು ಮಾತ್ರ ಆಯುರ್ವೇದ ರೀತ್ಯ ಇರುವುದೆಂದೂ, ಸರ್ಜರಿ ಎಂಡ್ ಮೈಧರಿ ಮೊದಲಾದ ಮುಖ್ಯ ವಿಷಯಗಳಲ್ಲಿಯೂ ತರಬೇತಿ ಇರುವುದೆಂದೂ, ಈ ವಿಷಯಗಳಲ್ಲಿ ನಾವು ಹೊಂದಿರುವ ಅನುಭವಗಳನ್ನು ಉಪಯೋಗಿಸಲು ಅವಕಾಶ ಕೊಡಬೇಕೆಂದೇ ನಮ್ಮ ಬೇಡಿಕೆ ಎಂದೂ ಅಲ್ಲದೆ ಕೇವಲ ಆಯುರ್ವೇದವನ್ನೇ ಕಲಿತು ಅಲೋಪೆಥಿಕ್ ವೈದ್ಯವಿದ್ಧತಿಯನ್ನು ಬಳಸಲು ನಾವು ಕೇಳಿಲ್ಲವೆಂದೂ, ನಮ್ಮ ಶಿಕ್ಷಣವು ಮಿಶ್ರಪದ್ಧತಿಯಾಗಿರುವದರಿಂದ, ನಮಗೆ ಮಿಶ್ರಪದ್ಧತಿಯನ್ನು ಉಪಯೋಗಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನುಡಿದರು

ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ವಿದ್ಯಾರ್ಥಿಗಳ ಮುಷ್ಕರ ಈ ದಿನ ನಡೆಯಿತು.

ಬಹಿರಂಗ ಸಭೆ

ಈ ಮಧ್ಯಾಹ್ನ 11 ವರೆ ಗಂಟೆಗೆ ಪಿ ಎಸ್ಸ್ ಅಧ್ಯಕ್ಷ ಶ್ರೀ ಅಶೋಕ ಮೆಹತ ವೈಸೂರು ನಗರಕ್ಕೆ ಆಗಮಿಸುವರು. ಸಂಜೆ 7 ಗಂಟೆಗೆ ವೈಸೂರು ಪುಂಭವನ ವೈದಾನದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣಮಾಡಲಿರುವರು

ಚಂದ್ರಗ್ರಹಕ್ಕೆ

ಚಂದ್ರಗ್ರಹಕ್ಕೆ ಅಮೆರಿಕ ಕಳಿಸಲಿರುವ ಬಾಹ್ಯಾಂತರಿಕ್ಷ ನಾವೆಯಲ್ಲಿ ಮೂರು ಜನರು ಇರುವರು. ನಾವೆಯಲ್ಲಿ 11 ಇಂಜಿನ್‌ಗಳು ಇರುವವು.

ಉಚ್ಚಾಟನೆ

ಅಲ್ಬೇನಿಯಾ ಪಕ್ಷದ 100 ಮಂದಿ ಸದಸ್ಯರ ಪಕ್ಷಿಯಿಂದ ಅಲ್ಬೇನಿಯಾದಿಂದ ಓಡಿಸಿದೆ ಪಕ್ಷದಲ್ಲಿ ಅಲ್ಬೇನಿಯಾ ವಿದ್ಯಾರ್ಥಿಗಳು ಓದುತ್ತಿದ್ದಾಗ ಇವರನ್ನು ಮದುವೆ ಆಗಿದ್ದರು.

ಪಾಕಿಸ್ತಾನದಲ್ಲಿ ಪ್ರವಾಸ

ಪಾಕಿಸ್ತಾನದಲ್ಲಿ 8 ದಿವಸಗಳ ಪ್ರವಾಸಕ್ಕಾಗಿ ಜಪಾನ್ ರಾಜಕುಮಾರ ಅಕಿಹಿಟೊ ಮತ್ತು ರಾಜಕುಮಾರಿ ಮಿಚಿಕೊ ಈ ಮಾಹೆ 23 ರಂದು ಕರಾಚಿಗೆ ಆಗಮಿಸುವರು.

ಸೂಚನೆ ಬಂದಿಲ್ಲ

ಗೋವಾದಲ್ಲಿರುವ ಪೋರ್ಚುಗೀಸು ಬಂದಿಗಳನ್ನು ಬಿಡಿಸಿಕೊಳ್ಳುವ ಸೂಚನೆ ಅರಬ ಗಣರಾಜ್ಯದ ಮೂಲಕ ಭಾರತದಿಂದ ಪೋರ್ಚುಗಲ್ಲಿಗೆ ಬಂದಿಲ್ಲವೆಂದು ಲಿಸ್ಬನ್ ವಾರ್ತೆ.

ಮುಂದುವರಿಯಿತು

ಸಿಂಹಳಕ್ಕೆ ದಲಾಯಿ ಲಾಮರು ಸಂದರ್ಶನವನ್ನು ಕೊಡಬೇಕಾದ್ದು ಅನಿರ್ದಿಷ್ಟ ಕಾಲದವರಿಗೆ ಮುಂದಕ್ಕೆ ಹೋಗಿದೆ

ದ್ವಿತೀಯ ಸಂತೆ

ರಾಷ್ಟ್ರೀಯ ವ್ಯವಸಾಯದ ಎಂಡನೆ ಸಂತೆ ಮೊನ್ನೆ ಮದ್ರಾಸಿನಲ್ಲಿ ಆರಂಭವಾಯಿತು.

For Quality Printing

ಶಿನಿ ಭಾಷಣಮಾಡಿದರು

L. N. Press

Sivarampet, Mysore

oo

ನಿಶೇಧ

ಭಾರತದ ಚಲನಚಿತ್ರಗಳು ಪಾಕಿಸ್ತಾನಕ್ಕೆ 5 ವರ್ಷಗಳ ವರೆಗೆ ಬಂದಂತೆ ಅಲ್ಲಿನ ಸರ್ಕಾರ ನಿಶೇಧಿಸಿರುವದಾಗಿ ಕರಾಚಿ ವಾರ್ತೆ.

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

ವುಡ್‌ಲ್ಯಾಂಡ್ಸ್ ವೈಭವ 6 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಅಶಾ ಪಂಕಿಖ್ ಮತ್ತಿಂ ಪ್ರಖ್ಯಾತ ತಾರೆಯರು ನಾತ್ಯವಹಿಸಿರುವ

ಅತ್ಯಂತ ಮನೋಜ್ಞ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಯಶಸ್ವಿ 3 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಶಿಕೃಷ್ಣ, ಹರಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]



ಅಶ್ವಾಮಿನ ಹಲ್ಲಿಯೊಂದನ್ನು ಹಿಡಿಯುವ ಕೈನುಗ್ಗದ ರೀತಿಯನ್ನು ನೇಯುತ್ತಿರುವುದನ್ನು ಚಿತ್ರವು ತೋರಿಸುತ್ತದೆ

SHAKTI SUDHA

A Superb Tonic

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

Edited, Printed & Published by the Proprietor, Dharma Pracharа Nirata M. S. Krishna Rao. at the Satyavadi Press Chamarajapuram, Mysore 4.